**All India Radio: Bangalore**
**National Bulletin In Kannada**
**11.08.2025 1.10pm**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**11.08.2025 1.10pm**
**<><><><>**

ಮುಖ್ಯಾಂಶಗಳು

೧. ನವದೆಹಲಿಯಲ್ಲಿ ಸಂಸದರ ನೂತನ ಬಹುಮಹಡಿ ವಸತಿ ಸಮ್ಮುಚ್ಚಯ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ

೨. ಸಂಸತ್ತಿನ ಉಭಯ ಸದನಗಳಲ್ಲಿ ಇಂದು ಮುಂದುವರಿದ ವಿಪಕ್ಷಗಳ ಗದ್ದಲ ; ಕಲಾಪ ೨ ಗಂಟೆಗೆ ಮುಂದೂಡಿಕೆ

೩. ಐಎನ್‌ಡಿಐ ಮೈತ್ರಿಕೂಟದ ನಾಯಕರಿಂದ ಸಂಸತ್ ಭವನದಿಂದ ಚುನಾವಣಾ ಆಯೋಗದ ಕಚೇರಿಯವರೆಗೆ ಪ್ರತಿಭಟನಾ ಪಾದಯಾತ್ರೆ

೪. ಎ.ಎಫ್.ಸಿ ಮಹಿಳಾ ಏಷ್ಯನ್ ಕಪ್- ೨೦೨೬ಕ್ಕೆ ಅರ್ಹತೆ ಗಳಿಸಿದ ಭಾರತದ ೨೦ ವರ್ಷದೊಳಗಿನವರ ಮಹಿಳಾ ಫುಟ್ಬಾಲ್ ತಂಡ

><><><><><><><><><

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಬಾಬಾ ಖರಕ್ ಸಿಂಗ್ ಮಾರ್ಗದಲ್ಲಿ ಸಂಸದರಿಗಾಗಿ ನಿರ್ಮಾಣಗೊಂಡಿರುವ ೧೮೪ ಹೊಸ ಮಾದರಿ-೭ ಬಹುಮಹಡಿ ವಸತಿ ಗೃಹಗಳ ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ಸಿಂಧೂರ ಮರದ ಸಸಿಯನ್ನು ನೆಟ್ಟರು. ಬಳಿಕ ಅವರು ಅಲ್ಲಿನ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ಬಳಿಕ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಅವರು, ದೆಹಲಿಯಲ್ಲಿ ಸಂಸದರ ವಸತಿ ಗುಣಮಟ್ಟವನ್ನು ಸುಧಾರಿಸಲಾಗಿದೆ. ಈಗ ಅವರಿಗಾಗಿ ಲಭ್ಯವಿದ್ದ ಸರ್ಕಾರಿ ವಸತಿ ಗೃಹಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗಿದೆ ಎಂದರು. ಇದನ್ನು ಸಾಧ್ಯವಾಗಿಸುವಲ್ಲಿ ಅತ್ಯಂತ ನಿಷ್ಠೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿದ ಅಭಿಯಂತಕರು ಹಾಗೂ ಕಾರ್ಮಿಕರ ಪಾತ್ರದ ಕುರಿತು

ಶ್ಲಾಘನೆ ವ್ಯಕ್ತಪಡಿಸಿ ಅವರಿಗೆ ಅಭಿನಂದನೆ ಸಲ್ಲಿಸಿದರು. ನೂತನ ವಸತಿ ಗೃಹಗಳ ಲಭ್ಯತೆ ಮೂಲಕ ಹಳೆಯ ಗೃಹಗಳಲ್ಲಿ ಎದುರಾಗುತ್ತಿದ್ದ ಸಮಸ್ಯೆಗಳು ನಿವಾರಣೆಯಾಗಿದೆ. ಸಂಸದರು ತಮ್ಮ ಸಮಸ್ಯೆಗಳಿಂದ ಮುಕ್ತಿ ಪಡೆದಲ್ಲಿ ತಮ್ಮ ಸಮಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಸಾರ್ವಜನಿಕರ ಸಮಸ್ಯೆಗಳ ನಿವಾರಣೆಗೆ ವಿನಿಯೋಗಿಸಬಹುದು ಎಂದು ತಿಳಿಸಿದರು. ಇಂದು ಸಂಸದರಿಗಾಗಿ ನೂತನ ವಸತಿ ಗೃಹಗಳನ್ನು ಲಭ್ಯವಾಗಿಸಿದ ಹಾಗೆಯೇ, ಪ್ರಧಾನಮಂತ್ರಿ ಆವಾಸ್ ಯೋಜನೆಯ ಮೂಲಕ ೪ ಕೋಟಿ ಬಡಜನರ ಗೃಹಪ್ರವೇಶವನ್ನು ನೆರವೇರಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೭ ಸೆಕೆಂಡ್‌ಗಳು)**

ಈ ವಸತಿ ಸಂಕೀರ್ಣ ಸಂಸದರ ಅಗತ್ಯಗಳಿಗೆ ತಕ್ಕಂತೆ ಎಲ್ಲ ಆಧುನಿಕ ಸೌಲಭ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಇಂಧನ ಉಳಿತಾಯ, ನವೀಕರಿಸಬಹುದಾದ ಇಂಧನ ಉತ್ಪಾದನೆ ಮತ್ತು ಪರಿಣಾಮಕಾರಿ ತ್ಯಾಜ್ಯ ನಿರ್ವಹಣೆಗೆ ಸಹಕಾರಿಯಾದ ಸುಸ್ಥಿರ ಮತ್ತು ಪರಿಸರ ಸ್ನೇಹಿ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ. ವಿಶೇಷಚೇತನರಿಗೆ ಅನುಕೂಲವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುವ ಈ ಸಂಕೀರ್ಣ ಎಲ್ಲರಿಗೂ ಅನುಕೂಲವಾಗುವ ವಿನ್ಯಾಸದ ನಿದರ್ಶನವಾಗಿದೆ. ಸಂಸದರು ತಮ್ಮ ಸಾರ್ವಜನಿಕ ಜವಾಬ್ದಾರಿಗಳನ್ನು ನೆರವೇರಿಸಲು ಸಹಾಯಕವಾಗುವಂತೆ ಕಚೇರಿ ಸ್ಥಳ, ಸಿಬ್ಬಂದಿಗೆ ವಸತಿ ಮತ್ತು ಸಮುದಾಯ ಕೇಂದ್ರಕ್ಕಾಗಿ ಪ್ರತ್ಯೇಕ ಜಾಗವನ್ನು ಮೀಸಲಿರಿಸಲಾಗಿದೆ. ಸಂಕೀರ್ಣದ ಕಟ್ಟಡಗಳನ್ನು ನವೀನ ಭೂಕಂಪನ ನಿರೋಧಕ ತಂತ್ರಜ್ಞಾನವನ್ನು ಆಧಾರವಾಗಿಟ್ಟುಕೊಂಡು ನಿರ್ಮಿಸಲಾಗಿದ್ದು, ಎಲ್ಲಾ ನಿವಾಸಿಗಳ ಭದ್ರತೆಗಾಗಿ ಸಮಗ್ರ ಹಾಗೂ ಬಲಿಷ್ಠ ಭದ್ರತಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

><><><><><><><><><><><><

ಸಂಸತ್ತಿನ ಉಭಯ ಸದನಗಳಲ್ಲಿಂದು ಪ್ರತಿಪಕ್ಷ ಸದಸ್ಯರು ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಗದ್ದಲ ಎಬ್ಬಿಸಿದ ಹಿನ್ನೆಲೆ ಲೋಕಸಭೆ ಹಾಗೂ ರಾಜ್ಯ ಸಭೆ ಕಲಾಪವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಲಾಗಿದೆ. ರಾಜ್ಯಸಭೆ ಇಂದು ಬೆಳಗ್ಗೆ ೧೧ ಗಂಟೆಗೆ ಸಭೆ ಸೇರಿದಾಗ ಉಪಸಭಾಪತಿ ಹರಿವಂಶ್ ಶೂನ್ಯವೇಳೆ ಕಲಾಪ ನಡೆಸಲು ಯತ್ನಿಸಿದರೂ, ಆದರೆ

ಪ್ರತಿಪಕ್ಷದ ಸದಸ್ಯರ ಬಿಹಾರದ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಇತರ ರಾಜ್ಯಗಳ ವಿಷಯಗಳ ಕುರಿತು ಪ್ರಸ್ತಾಪಿಸಿ ಪ್ರತಿಭಟನೆ ನಡೆಸಿದರು. ಈ ವೇಳೆ ಉಪಸಭಾಪತಿಯವರು ವಿವಿಧ ರಾಜಕೀಯ ಪಕ್ಷಗಳಿಂದ ಒಟ್ಟು ೨೯ ನಿಲುವಳಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ ೧೮ ಸೂಚನೆಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳ ಕುರಿತಾಗಿದ್ದು, ನಿಯಮಾನುಸಾರ ಅವುಗಳ ಕುರಿತು ಚರ್ಚೆ ನಡೆಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿಭಟನಾ ನಿರತ ಸದಸ್ಯರಲ್ಲಿ ಸುಗಮ ಕಲಾಪ ನಡೆಸಲು ಅನುವು ಮಾಡಿಕೊಡುವಂತೆ ಕೋರಿದರೂ ಗದ್ದಲ ಮುಂದುವರೆಯಿತು. ಈ ವೇಳೆ ಉಪಸಭಾಪತಿ ಈವರೆಗೆ ೬೮ ಗಂಟೆಗಳ ಕಲಾಪದ ಸಮಯ ವ್ಯರ್ಥವಾಗಿದೆ ಎಂದು ಬೇಸರ ವ್ಯಕ್ತಪಡಿಸಿ ಕಲಾಪವನ್ನು ೨ ಗಂಟೆಗೆ ಮುಂದೂಡಿದರು. ಲೋಕಸಭೆಯಲ್ಲೂ ಇದೇ ರೀತಿಯ ಘಟನಾವಳಿಗಳು ನಡೆದವು. ಲೋಕಸಭಾಧ್ಯಕ್ಷ ಓಂ ಬಿರ್ಲಾ, ಈ ಪ್ರತಿಭಟನೆ ಪೂರ್ವಯೋಜಿತವಾಗಿರುವಂತೆ ಭಾಸವಾಗುತ್ತಿದ್ದು, ಪ್ರಜಾಪ್ರಭುತ್ವಕ್ಕೆ ಹಾನುಯುಂಟು ಮಾಡುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.ಗದ್ದಲದ ನಡುವೆಯೇ ಕೇಂದ್ರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ವನ್ಯಜೀವಿ ವಾಸಸ್ಥಳಗಳ ಸಮಗ್ರ ಅಭಿವೃದ್ಧಿ ಯೋಜನೆ ಕುರಿತ ಪ್ರಶ್ನೆಗೆ ಉತ್ತರಿಸಿದರು. ಬಳಿಕವೂ ವಿಪಕ್ಷಗಳ ಗದ್ದಲ ಮುಂದುವರಿದ ಬೆನ್ನಲ್ಲೇ ಕಲಾಪವನ್ನು ೨ ಗಂಟೆಗೆ ಮುಂದೂಡಲಾಗಿದೆ.

><><><><><><><><><><><

ಬಿಹಾರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನದ ವಿರುದ್ಧದ ಪ್ರತಿಭಟನೆಯ ಭಾಗವಾಗಿ ಇಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಕಾಂಗ್ರೆಸ್ ಸಂಸದೆ ಪ್ರಿಯಾಂಕ ಗಾಂಧಿ ವಾದ್ರಾ ಸೇರಿದಂತೆ ಐಎನ್‌ಡಿಐ ಮೈತ್ರಿಕೂಟದ ನಾಯಕರು ಸಂಸತ್ ಭವನದಿಂದ ಭಾರತೀಯ ಚುನಾವಣಾ ಆಯೋಗದ ಪ್ರಧಾನ ಕಚೇರಿಯವರೆಗೆ ಪ್ರತಿಭಟನಾ ಪಾದಯಾತ್ರೆ ನಡೆಸಿದರು. ಪಾದಯಾತ್ರೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅಖಿಲೇಶ್ ಯಾದವ್, ಚುನಾವಣಾ ಆಯೋಗದ ವಿರುದ್ಧ ಆರೋಪ ಕೇಳಿಬರುತ್ತಿರುವುದು ಇದೇ ಮೊದಲ ಬಾರಿ ಅಲ್ಲ. ಕರ್ನಾಟಕದಲ್ಲಿ ಮತಗಳ್ಳತನದಲ್ಲಿ

ತೊಡಗಿರುವ ಅಧಿಕಾರಿಗಳ ವಿರುದ್ಧ ಚುನಾವಣಾ ಆಯೋಗ ಕ್ರಮ ಕೈಗೊಂಡಿಲ್ಲವೇಕೆ ಎಂದು ಪ್ರಶ್ನಿಸಿದರು.

><><><><><><><><><

ಉಕ್ರೇನ್‌ನಲ್ಲಿ ಕದನ ವಿರಾಮ ಕುರಿತಂತೆ ಅಮೆರಿಕ ಹಾಗೂ ರಷ್ಯಾ ನಡುವಿನ ಪ್ರಸ್ತಾಪಿತ ಮಾತುಕತೆಗಳ ಹಿನ್ನೆಲೆಯಲ್ಲಿ ಐರೋಪ್ಯ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥೆ ಕಾಜಾ ಕಲ್ಲಾಸ್, ಅಮೆರಿಕ-ರಷ್ಯಾ ನಡುವಿನ ಯಾವುದೇ ಒಪ್ಪಂದದಲ್ಲಿ ಉಕ್ರೇನ್ ಮತ್ತು ಯೂರೋಪ್ ಒಳಗೊಂಡಿರಬೇಕು ಎಂದು ಸ್ಪಷ್ಟಪಡಿಸಿದ್ದಾರೆ. ಇಂದು ಬೆಳಗ್ಗೆ ಐರೋಪ್ಯ ಒಕ್ಕೂಟದ ವಿದೇಶಂಗ ಸಚಿವರೊಂದಿಗೆ ನಡೆದ ಆನ್‌ಲೈನ್ ಸಭೆಯಲ್ಲಿ ಕಾಜಾ ಈ ಕುರಿತು ಪ್ರಸ್ತಾಪಿಸಿದ್ದಾರೆ. ಉಕ್ರೇನ್ ಬಿಕ್ಕಟ್ಟಿನ ಕುರಿತು ಯಾವುದೇ ರೀತಿಯ ರಾಜತಾಂತ್ರಿಕ ಪರಿಹಾರ ಉಕ್ರೇನ್ ಸೇರಿದಂತೆ ಯೂರೋಪ್‌ನ ಭದ್ರತೆಯ ಹಿತಾಸಕ್ತಿಗೆ ಅನುಗುಣವಾಗಿರಬೇಕು ಎಂದಿದ್ದಾರೆ. ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅಲಾಸ್ಕಾದಲ್ಲಿ ಉಕ್ರೇನ್‌ನಲ್ಲಿ ಕದನ ವಿರಾಮ ಕುರಿತು ಚರ್ಚಿಸಲು ಭೇಟಿಯಾಗಲಿದ್ದಾರೆ. ಇದು ೨೦೨೧ರ ಬಳಿಕ ಉಭಯ ನಾಯಕರ ನಡುವಿನ ಮೊದಲ ಸಭೆಯಾಗಿರಲಿದೆ.

><><><><><><><><><

ಪಶ್ಚಿಮ ಟರ್ಕಿಯ ಸಿಂದಿರ್ಗಿಯಲ್ಲಿ, ೬.೧ ತೀವ್ರತೆಯ ಭೂಕಂಪ ಸಂಭವಿಸಿದ್ದು, ಓರ್ವ ನಾಗರಿಕ ಮೃತಪಟ್ಟಿದ್ದಾನೆ. ಭೂಕಂಪನಕ್ಕೆ ೧೬ ಕಟ್ಟಡಗಳು ಕುಸಿದಿದ್ದು, ಕನಿಷ್ಠ ೨೯ ಮಂದಿ ಗಾಯಗೊಂಡಿದ್ದಾರೆ. ಇಸ್ತಾಂಬುಲ್ ಮತ್ತು ಪ್ರವಾಸಿ ತಾಣವಾದ ಇಜ್ಮಿರ್ ಸೇರಿದಂತೆ ದೇಶದ ಪಶ್ಚಿಮದಲ್ಲಿರುವ ಹಲವಾರು ನಗರಗಳಲ್ಲಿ ಭೂಕಂಪದ ಅನುಭವವಾಗಿದೆ ಎಂದು ಟರ್ಕಿ ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ. ರಕ್ಷಣಾ ಹಾಗೂ ಪರಿಹಾರ ತಂಡಗಳನ್ನು ಭೂಕಂಪ ಪೀಡಿತ ಪ್ರದೇಶಗಳಲ್ಲಿ ತ್ವರಿತವಾಗಿ ಕಳುಹಿಸಿ, ಶೋಧ ಹಾಗೂ ರಕ್ಷಣಾ ಕಾರ್ಯಚರಣೆಯನ್ನು ಪೂರ್ಣಗೊಳಿಸಲಾಗಿದೆ. ಈವರೆಗೆ ವರದಿಯಾಗಿರುವ ಮಾಹಿತಿ ಹೊರತುಪಡಿಸಿ ಮತ್ತಿತರ ಯಾವುದೇ ಗಂಭೀರ ಹಾನಿ ಅಥವಾ ಸಾವು-ನೋವು ದಾಖಲಾಗಿಲ್ಲ ಎಂದು ಟರ್ಕಿ ಸಚಿವ ಅಲಿ ಯರ್ಲಿಕಾಯ ತಿಳಿಸಿದ್ದಾರೆ.

><><><><><><><><><><><

ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ೮೦ನೇ ಅಧಿವೇಶನದ ವೇಳೆ ಆಸ್ಟ್ರೇಲಿಯಾ ಪ್ಯಾಲಿಸ್ತೀನ್ ಅನ್ನು ಅಧಿಕೃತವಾಗಿ ಗುರುತಿಸಲಿದೆ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಟೋನಿ ಗುಟೆರೆಸ್ ಘೋಷಿಸಿದ್ದಾರೆ. ಇದು ಫ್ರಾನ್ಸ್, ಬ್ರಿಟನ್ ಮತ್ತು ಕೆನಡಾ ರಾಷ್ಟ್ರಗಳ ನಿರ್ಧಾರದೊಂದಿಗೆ ಹೊಂದಿಕೆಯಾಗುತ್ತದೆ ಮತ್ತು ಮಧ್ಯಪ್ರಾಚ್ಯದಲ್ಲಿ ಎರಡು ರಾಜ್ಯ ಪರಿಹಾರದಡಿಗೆ ಅಂತಾರಾಷ್ಟ್ರೀಯ ನಿಲುವಿಗೆ ಉತ್ತೇಜನ ನೀಡುತ್ತದೆ.

><><><><><><><><><><><

ಭಾರತದ ೨೦ ವರ್ಷದೊಳಗಿನ ಮಹಿಳಾ ಫುಟ್ಬಾಲ್ ತಂಡ ಯಾಂಗೋನ್‌ನಲ್ಲಿ ನಿನ್ನೆ ಆತಿಥೇಯ ಮ್ಯಾನ್ಮಾರ್ ವಿರುದ್ಧ ೧-೦ ಅಂತರದ ಜಯದೊಂದಿಗೆ ಎ.ಎಫ್.ಸಿ ಮಹಿಳಾ ಏಷ್ಯನ್ ಕಪ್-೨೦೨೬ ರಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ೨೦ ವರ್ಷಗಳ ಬಳಿಕ ಭಾರತದ ಮಹಿಳಾ ಫುಟ್ಬಾಲ್ ತಂಡದ ಕನಸು ನನಸಾಗಿದ್ದು, ಥೈಲ್ಯಾಂಡ್‌ನಲ್ಲಿ ನಡೆಯಲಿರುವ ಏಷ್ಯನ್ ಕಪ್ -೨೦೨೬ ರಲ್ಲಿ ಭಾಗವಹಿಸಲು ಅರ್ಹತೆ ಗಳಿಸಿದೆ. ಆತಿಥೇಯ ಥೈಲ್ಯಾಂಡ್ ಈ ಮೊದಲೇ ೨೦೨೬ರ ಮಹಿಳಾ ಏಷ್ಯನ್ ಕಪ್‌ಗೆ, ಅರ್ಹತೆ ಪಡೆದಿದ್ದು, ೧೨ ತಂಡಗಳ ಕ್ರೀಡಾಕೂಟಕ್ಕೆ ಉಳಿದ ೧೧ ತಂಡಗಳನ್ನು ಅರ್ಹತಾ ಪಂದ್ಯಗಳ ಮೂಲಕ ನಿರ್ಧರಿಸಲಾಗುತ್ತದೆ. ಅರ್ಹತಾ ಪಂದ್ಯಗಳಿಗಾಗಿ, ೩೨ ತಂಡಗಳನ್ನು ನಾಲ್ಕು ತಂಡಗಳ ಎಂಟು ಗುಂಪುಗಳಾಗಿ ವಿಂಗಡಿಸಲಾಗಿದೆ.

><><><><><><><><><><><